# ಆಧುನಿಕ ವಿಜ್ಞಾನಕ್ಕಿಂತ ಅಧ್ಯಾತ್ಮ ಶ್ರೇಷ್ಠ !

## (ಅಧ್ಯಾತ್ಮದ ಬಗ್ಗೆ ತಪ್ಪು ತಿಳುವಳಿಕೆಗಳ ನಿವಾರಣೆ ಸಹಿತ)

## ಮನೋಗತ

'ಸುಖ ಎಳ್ಳಿನಷ್ಟು ಮತ್ತು ದುಃಖ ಪರ್ವತದಷ್ಟು' ಎಂಬ ಗಾದೆ ಮಾತಿನ ಅನುಭವ ಹೆಚ್ಚಿನ ಜನರಿಗೆ ಇರುತ್ತದೆ. ಕಲಿಯುಗದಲ್ಲಿ ಸಾಮಾನ್ಯವಾಗಿ ಮನುಷ್ಯರ ಜೀವನದಲ್ಲಿ ಸಾಮಾನ್ಯವಾಗಿ ಸುಖವು ಶೇ. ೨೫ ರಷ್ಟು ಮತ್ತು ದುಃಖವು ಶೇ. ೭೫ ರಷ್ಟಿರುತ್ತದೆ. ಕೇವಲ ಮನುಷ್ಯರು ಮಾತ್ರವಲ್ಲ ಇತರ ಪ್ರಾಣಿಗಳ ಪ್ರಯತ್ನವೂ ಹೆಚ್ಚೆಚ್ಚು ಸುಖವನ್ನು ಹೇಗೆ ಪಡೆಯಬೇಕು ಎಂಬುದಕ್ಕಾಗಿಯೇ ಇರುತ್ತದೆ. ಇದಕ್ಕಾಗಿ ಪ್ರತಿಯೊಬ್ಬರೂ ಪಂಚಜ್ಞಾನೇಂದ್ರಿಯಗಳು, ಮನಸ್ಸು ಮತ್ತು ಬುದ್ಧಿಯಿಂದ ವಿಷಯಸುಖವನ್ನು ಉಪಭೋಗಿಸಲು ಪ್ರಯತ್ನಿಸುತ್ತಾರೆ; ಆದರೆ ವಿಷಯ ಸುಖವು ತಾತ್ಕಾಲಿಕ ಹಾಗೂ ಕಡಿಮೆ ಮಟ್ಟದ್ದಾಗಿರುತ್ತದೆ ಮತ್ತು ಆತ್ಮಸುಖವು ಅರ್ಥಾತ್ ಆನಂದವು ಚಿರಂತನ ಮತ್ತು ಅತಿ ಉಚ್ಚಮಟ್ಟದ್ದಾಗಿರುತ್ತದೆ. ಆತ್ಮಸುಖವನ್ನು ಪ್ರಾಪ್ತಗೊಳಿಸಿಕೊಡುವ ವಿಷಯವೆಂದರೆ ಅಧ್ಯಾತ್ಮ. ಆದುದರಿಂದ 'ಸುಖಃ ಚ ನ ವಿನಾ ಧರ್ಮಾತ್ ತಸ್ಮಾತ್ ಧರ್ಮಪರೋ ಭವೇತ್' ಅಂದರೆ ನಿಜವಾದ ಸುಖವು (ಆನಂದವು) ಧರ್ಮಾಚರಣೆಯನ್ನು ಮಾಡದೇ ಸಿಗುವುದಿಲ್ಲ; ಆದುದರಿಂದ ಯಾವಾಗಲೂ ಧರ್ಮಾಚರಣೆಯನ್ನು ಮಾಡಬೇಕು ಎಂದು ಹೇಳಲಾಗಿದೆ. ಅಧ್ಯಾತ್ಮದ ಆಧಾರವನ್ನು ಪಡೆದು, ಅಂದರೆ ಸಾಧನೆಯನ್ನು ಮಾಡಿ ಆತ್ಮಸುಖವನ್ನು ಪಡೆಯಲು ಪ್ರಯತ್ನಿಸಿದಲ್ಲಿ ಲೌಕಿಕ ಮತ್ತು ಪಾರಲೌಕಿಕ ಸುಖವೂ ಪ್ರಾಪ್ತವಾಗುತ್ತದೆ.

ವಿಷಾದವೆಂದರೆ ಅಧ್ಯಾತ್ಮಕ್ಕೆ ಇಷ್ಟೊಂದು ಮಹತ್ವವಿದ್ದರೂ, ಹೆಚ್ಚಿನ ಜನರಿಗೆ ಅಧ್ಯಾತ್ಮದ ಅರ್ಥವೂ ಸರಿಯಾಗಿ ತಿಳಿದಿರುವುದಿಲ್ಲ. ಆದುದರಿಂದ ಅಧ್ಯಾತ್ಮದಂತಹ ಸರ್ವೋಚ್ಚ ಆನಂದ ಮತ್ತು ಸರ್ವಜ್ಞತೆಯನ್ನು ನೀಡುವ ವಿಷಯದ ಕಡೆಗೆ ಬಹಳ ಕಡಿಮೆ ಜನರು ಹೊರಳುತ್ತಾರೆ. ಆನಂದವು ವಿಷಯಸುಖದ ಅನೇಕ ಪಟ್ಟಿರುತ್ತದೆ ಎಂಬುದು ತಿಳಿದರೆ, ವಿಷಯಸುಖಕ್ಕಿಂತ ಆನಂದಪ್ರಾಪ್ತಿಗಾಗಿ ಯಾರಾದರೂ ಪ್ರಯತ್ನಿಸಬಹುದು. ಇಂತಹ ಪ್ರಯತ್ನಗಳಾಗಬೇಕೆಂಬ ಉದ್ದೇಶವನ್ನಿಟ್ಟುಕೊಂಡೇ ಈ ಗ್ರಂಥ ಬರೆಯಲಾಗಿದೆ. ಅಧ್ಯಾತ್ಮದ ಅಧ್ಯಯನ ಮಾಡುವಾಗ ಯಾವ ಅಡಚಣೆಗಳು ಬರುತ್ತವೆ ಎಂಬುದರ ವಿವೇಚನೆಯನ್ನೂ ಈ ಗ್ರಂಥದಲ್ಲಿ ಮಾಡಲಾಗಿದೆ.

ಅಧ್ಯಾತ್ಮವು ಕೇವಲ ಬುದ್ಧಿಯ ಸ್ತರದಲ್ಲಿ ತಿಳಿದುಕೊಳ್ಳುವ ವಿಷಯವಲ್ಲ, ಅದು ಪ್ರತ್ಯಕ್ಷ ಕೃತಿ ಮಾಡಿ ಅನುಭೂತಿಯನ್ನು ಪಡೆಯುವ ವಿಷಯವಾಗಿದೆ. ಈ ಗ್ರಂಥವನ್ನು ಓದಿ ಕೆಲವರಾದರೂ ಸಾಧನೆಯನ್ನು ಪ್ರಾರಂಭಿಸಬೇಕು ಮತ್ತು ಸಾಧನೆಯಿಂದ ಅವರ ಅಂತರ್ಯದಲ್ಲಿ ಆನಂದದ ಝರಿಯು ಬೇಗನೇ ನಿರ್ಮಾಣವಾಗಬೇಕು ಎಂದು ಗುರುಚರಣಗಳಲ್ಲಿ ಪ್ರಾರ್ಥನೆ. – ಸಂಕಲನಕಾರರು

(ಸನಾತನದ 'ಅಧ್ಯಾತ್ಮಶಾಸ್ತ್ರ' ಕುರಿತಾದ ಎಲ್ಲ ಗ್ರಂಥಗಳ ಸಮಾನ ಮನೋಗತವನ್ನು 'ಧರ್ಮ' ಗ್ರಂಥದಲ್ಲಿ ಕೊಡಲಾಗಿದೆ.)

**ಅನುಕ್ರಮಣಿಕೆ**

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


೧. **ವ್ಯುತ್ಪತ್ತಿ ಮತ್ತು ಅರ್ಥ** ೧೪

೨. **ಸಮಾನಾರ್ಥಕ ಶಬ್ದಗಳು** ೧೫

೩. **ಅಧ್ಯಾತ್ಮದ ಅಧಿಕಾರಿ** ೧೫

೪. **ಅಧ್ಯಾತ್ಮದ ಬಗ್ಗೆ ತಪ್ಪುಗ್ರಹಿಕೆಗಳು** ೧೫

* ಸಾಧನೆಯ ಬಗ್ಗೆ ತಪ್ಪುಗ್ರಹಿಕೆಗಳು ೨೧
  * ವೃದ್ಧರಾದ ಮೇಲೆ ಸಾಧನೆಯನ್ನು ಮಾಡೋಣ ಎಂಬ ವಿಚಾರ ೨೧
  * ತಮ್ಮ ಮನಸ್ಸಿನಂತೆ ಇಷ್ಟದೇವತೆಯ ಅಥವಾ ಸಂತರ ಸಾಧನೆ ಮಾಡುವುದು ೨೨
  * ಮದುವೆ ಮಾಡಿಕೊಳ್ಳಬಾರದೆಂದು ಅನಿಸುವುದು ೨೨
  * ವ್ಯವಹಾರದಲ್ಲಿ ಅಡಚಣೆಗಳು ಬರಬಹುದು ಎಂಬ ಸಂಶಯ ೨೨

೫. **ಅಧ್ಯಾತ್ಮದ ಬಗೆಗಿನ ತಪ್ಪುತಿಳುವಳಿಕೆಗಳ ಕಾರಣಗಳು** ೨೫

* ಸಮಾಜದಲ್ಲಿನ ಗಣ್ಯ ವ್ಯಕ್ತಿಗಳಿಂದಾಗುವ ತಪ್ಪುಮಾರ್ಗದರ್ಶನ ೨೫
* ಪ್ರಸಾರ ಮಾಧ್ಯಮಗಳು ಅಜ್ಞಾನವನ್ನು ಪಸರಿಸುವುದು ೨೭
* ವಿಶ್ವವಿದ್ಯಾಲಯಗಳಿಂದ ಅಜ್ಞಾನದ ಪ್ರಸಾರ ೨೭
* ಸರಕಾರದಿಂದ ಪರೋಕ್ಷ ವಿರೋಧ ೨೭
* ಬುದ್ಧಿಪ್ರಾಮಾಣ್ಯವಾದಿಗಳ ಅಜ್ಞಾನ ಮತ್ತು ಅಂಧಶ್ರದ್ಧೆ ೨೮

೬. **ಮಹತ್ವ** ೩೧

೭. **ಮಾನವನಿಗೆ ಅಧ್ಯಾತ್ಮದಲ್ಲಿ ಏಕೆ ಆಸಕ್ತಿಯಿರುತ್ತದೆ ?** ೩೪

೮. **ಇತರ ಶಾಸ್ತ್ರಗಳು ಮತ್ತು ಅಧ್ಯಾತ್ಮಶಾಸ್ತ್ರ** ೩೫

೯. **ಅಧ್ಯಾತ್ಮದ ಅಧ್ಯಯನ ಮಾಡುವಾಗ ಬರುವ ಅಡಚಣೆಗಳು** ೫೮

卐 **ಅಧ್ಯಾತ್ಮದ ಬಗೆಗಿನ ಟೀಕೆಗಳು ಅಥವಾ ಅಯೋಗ್ಯ ವಿಚಾರಗಳು ಮತ್ತು ಅವುಗಳ ಖಂಡನೆ** ೭೦